ಶ್ರೀ ಬಿ. ರಾಚಯ್ಯ (ಮಾನ್ಯ ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರಾವಳಿ ಮತ್ತು ಸೌತ್‌ಕೆನರಾ ಡಿಸ್ಟ್ರಿಕ್ಟ್‌ಗಳಿಗೆ ಹೊಸದಾಗಿ ಡಾಕ್ ರ್ಸ್‌ನ್ನು ಹಾಕಿದರೆ ಅವರು ಹೋಗಬೇಕಾದಕ್ಕಿಂತ ಪಂಚಿತವಾಗಿ ವರ್ಗಾವಣೆ ಮಾಡಿಕೊಂಡು ಈ ಕಡೆ ಬರುತ್ತಾರೆ. ದಯವಿಟ್ಟು ಮಾನ್ಯ ಸದಸ್ಯರಿಗೆ ಯಾರಾದರೂ ಬೇಕಾದವರು ಇದ್ದರೆ ಹೇಳಿದರೆ ಈಗಲೇ ಆರ್ಡರ್ ಮಾಡಿ ಕಳುಹಿಸಿಕೊಡುತ್ತೇನೆ.

೯) ಮಂಗಳೂರು ಮಹಾನಗರ ಪಾಲಿಕೆಗೆ ಅಭಿವೃದ್ಧಿ ಕೆಲಸಗಳಿಗಾಗಿ ಹಣವನ್ನು ಬಿಡುಗಡೆ ಮಾಡಲು ಒತ್ತಾಯ

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಗೆ ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲೇ ಪ್ರಥಮ ಬಹುಮಾನ ಬಂದಿದೆ. ಅಂತಹ ನಗರಪಾಲಿಕೆಗೆ ಗ್ರಾಮಾಂತರ ಪ್ರದೇಶದ ೧೪ ಗ್ರಾಮಗಳೂ ಸೇರಿಕೊಂಡಿವೆ. ಇಡೀ ನಗರ ಪಾಲಿಕೆಯು ಅಭಿವೃದ್ಧಿಗೆ ಬಹು ಮುಖ್ಯವಾಗಿ ರಸ್ತೆಗಳ ದುರಸ್ಥಿ ಮತ್ತು ಡಾಮರು ಹಾಕುವ ಕೆಲಸ ಅತೀ ಮುಖ್ಯವಾಗಿದೆ. ಕುಡಿಯುವ ನೀರಿನ ಅಭಾವ ನೀಗಿಸುವುದು ಅತ್ಯಗತ್ಯವಾಗಿದೆ. ಆದಿಲ್ಲವೂ ಈಗ ಹಣದ ಕೊರತೆಯಿಂದ ಸ್ಥಗಿತವಾಗಿರುತ್ತದೆ. ಆಕ್ಟ್ರಾಯಿ ಬಾಬ್ತು ಸರಕಾರದಿಂದ ಈ ನಗರಪಾಲಿಕೆಗೆ ಸಲ್ಲಬೇಕಾದ ಒಂದು ಕೋಟಿ ೩೯ ಲಕ್ಷ ರೂಪಾಯಿಗಳು ಇನ್ನೂ ಸಂದಾಯವಾಗಿಲ್ಲ. ಅಭಿವೃದ್ಧಿ ಕೆಲಸಗಳಿಗಾಗಿ ಈ ಹಣವನ್ನು ಅವರು ಕೇಳುತ್ತಲೇ ಬಂದಿದ್ದಾರೆ. ಈ ಹಣವನ್ನು ಒದಗಿಸಿದರೆ ರಸ್ತೆಗಳಿಗೆ ಡಾಮರು ಕುಡಿಯುವ ನೀರಿನ ಸೌಕರ್ಯ ಇನ್ನಿತರ ಉಪಯುಕ್ತ ಅಭಿವೃದ್ಧಿಯ ಕೆಲಸಗಳನ್ನು ಮಾಡಬಹುದಾಗಿದೆ. ಈ ಬಾಕಿ ಹಣವನ್ನು ಸರಕಾರ ಶೀಘ್ರ ಕೊಡುವಂತಾಗಬೇಕು. ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ ೧,೮೬,೯೨,೧೯೫ ರೂಪಾಯಿಗಳ ಒಟ್ಟು ಪರಿಹಾರ ಹಣವಿದ್ದು ಇದರಲ್ಲಿ ೬೫,೩೦,೫೫೬ ರೂಪಾಯಿಗಳು ಬಿಡುಗಡೆ ಯಾಗಿದ್ದು ವಿದ್ಯುಚ್ಛಕ್ತಿ ಇಲಾಖೆ ಹಾಗೂ ನೀರು ಸರಬರಾಜು ಇಲಾಖೆಯವರಿಗೆ ೨೦,೨೮,೦೦೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ಉಳಿದಂತಹ ಹಣವನ್ನು ಇಷ್ಟರಲ್ಲಿಯೇ ಬಿಡುಗಡೆ ಮಾಡಲಾಗುತ್ತದೆ.

೧೦) ಬಸವಕಲ್ಯಾಣ ತಾಲ್ಲೂಕಿನ ಮಂರಳಾದಲ್ಲಿ ಕುಮಾರಿ ಭಾಗೀರಥಿ ಎನ್ನುವ ಆರೋಗ್ಯ ಸಹಾಯಕಿ ಮರಣ ಹೊಂದಿರುವುದು.

ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲ್ಲೂಕಿನ ಮರಳಾದಲ್ಲಿ ೨೦-೧೦-೮೮ರಂದು ಮರಣ ಹೊಂದಿದ ಕುಮಾರಿ ಭಾಗೀರಥಿ ಕಿರಿಯ ಆರೋಗ್ಯ ಸಹಾಯಕಿ ೧೮-೧೦-೮೮ರ ರಾತ್ರಿ ಅಶೋಕ, ಪೋಲೀಸ್ ಪೇದೆ ಮರಳಾ ಪೋಲೀಸ್ ಠಾಣೆ ಸುಭಾಷ್ ಆಸ್ಪತ್ರೆ ಸಿಪಾಯಿ ಮತ್ತು ಪಿ ಎಸ್.ಐ.ರವರ ಮಗ ಇವರೆಲ್ಲರೂ ಕೂಡಿ ಮಾನಭಂಗ ಮಾಡಿದ್ದಾರೆಂದು ವರದಿ ಇದೆ. ಮಾನಭಂಗಕ್ಕೆ ಒಳಗಾದ ಭಾಗೀರಥಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರವು ಸಿ.ಓ ಡಿ. ತನಿಖೆ ಮಾಡುವುದಾಗಿ ಹೇಳಿಕೊಂಡಿದ್ದರು. ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ತಂಪಾಕೂರು ಜಿಲ್ಲೆಯ ಪದ್ಮಲತಾ ಪ್ರಕರಣ ಗುಲಬರ್ಗಾ ಜಿಲ್ಲೆಯ ಚಿತಾಪುರದಲ್ಲಿ ಎ.ಎನ್.ಎಂ. ಕೊಲೆ, ಬಳ್ಳಾರಿಯಲ್ಲಿ ಎ.ಎನ್.ಎಂ. ಕೊಲೆ ಇದನ್ನು ಪ್ರತಿಭಟಿಸಿ ಮೌನವಣಿಗೆ ಪ್ರದರ್ಶನ ಕಿರಿಯ ಆರೋಗ್ಯ ಸಹಾಯಕಿಯರು ಮಾಡಿದ್ದಾರೆ. ಅವರ ಸಂರಕ್ಷಣೆ ಇಲ್ಲದಂತಾಗಿದೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ, ನಿಯಮ ೨೩ರಲ್ಲಿ ಯಾವುದಾದರೊಂದು ಸ್ಪೆಸಫಿಕ್ ಘಟನೆಯನ್ನು ರೆಫರ್ ಮಾಡಿ ಬರೆಯಬೇಕು. ಅದು ಬಿಟ್ಟು ಒಂದೇ ನೋಟೀಸ್‌ನಲ್ಲಿ ಎರಡು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಿರುತ್ತದೆ. ಆಗ ಏನು ಮಾಡಬೇಕು ?

ಅಧ್ಯಕ್ಷರು.—ಸದಸ್ಯರಿಗೆ ಟ್ರೈನಿಂಗ್ ಕೊಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಆದರೂ ಸಹ ಅವರ ಪ್ರಶ್ನೆಗೆ ನಾನು ಈ ಕೆಳಕಂಡ ಉತ್ತರವನ್ನು ಕೊಡಬಯಸುತ್ತೇನೆ.

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕುಟ್ಟಿಯಾಳ ಗ್ರಾಮದ ಶ್ರೀ ಕ. ಕೆ. ತಿಮ್ಮಯ್ಯನವರ ಪುತ್ರಿ ಕು. ಭಾಗೀರಥಿ, ಸುಮಾರು ೩ ವರ್ಷಗಳಿಂದ ಎ ಎನ್.ಎಂ. ಆಗಿದ್ದು ಈಗ್ಗೆ ಕಳೆದ ೭ ತಿಂಗಳಿನಿಂದ ಮಂಟಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಮಹಿಳಾ ವೈದ್ಯಾಧಿಕಾರಿ ಶ್ರೀಮತಿ ಶಶಿಕಲಾ ಅವರ ಜೊತೆಯಲ್ಲಿ ವಸತಿ ಗೃಹದಲ್ಲಿ ವಾಸವಾಗಿದ್ದರು. ದಿನಾಂಕ ೧೭–೧–೬೯ರಂದು ಅವರನ್ನು ಕಾಣಲು ಅವರ ಜೊತೆಗಾರ್ತಿ ಕು. ಉಮಾದೇವಿ ಎಂಬುವವರು ಬಸವಕಲ್ಯಾಣದ ಕೋಹಿನೂರು ಗ್ರಾಮದಿಂದ ಬಂದಿದ್ದರು. ಭಾಗೀರಥಿಯನ್ನು ಮಹಿಳಾ ವೈದ್ಯಾಧಿಕಾರಿ ಶ್ರೀಮತಿ ಶಶಿಕಲಾರವರ ಮನೆಯಲ್ಲಿ ಭೇಟಿಯಾದ ಮೇಲೆ ಇಬ್ಬರೂ ಅಡಿಗೆ ಮಾಡಿ, ಊಟ ಮಾಡಿದರು. ಮಾತನಾಡುತ್ತಾ ಮಲಗಿಕೊಂಡರು.

ದಿನಾಂಕ ೧೮–೧–೬೮ರಂದು ಬೆಳಿಗ್ಗೆ ೮–೦೦ ಗಂಟೆಗೆ ಕು. ಉಮಾದೇವಿ ಎಚ್ಚರಗೊಂಡ ಮೇಲೆ, ಕು. ಭಾಗೀರಥಿಯನ್ನು ಎಚ್ಚರಿಸಿದಾಗ ಆಕೆ ಎಚ್ಚರಗೊಳ್ಳಲಿಲ್ಲ. ಕು. ಉಮಾದೇವಿ ಈ ವಿಷಯವನ್ನು ಕೂಡಲೇ ವೈದ್ಯಾಧಿಕಾರಿ ಶ್ರೀಮತಿ ಶಶಿಕಲಾರವರಿಗೆ ತಿಳಿಸಿದರು. ಅವರು ಕು. ಭಾಗೀರಥಿಯವರನ್ನು ಪರೀಕ್ಷಿಸಿ ಭಾಗೀರಥಿ ಅಮಲಿನಲ್ಲಿರಬಹುದು, ಹಾವು ಕಚ್ಚಿರಬಹುದು ಅಥವಾ ವಿಷವುಳ್ಳ ಪದಾರ್ಥ ಸೇವಿಸಿರಬಹುದೆಂದು ಸರ್ವಾಂಗ ಪರೀಕ್ಷೆ ಮಾಡಿದರು. ನಂತರ ಅವರು ಕೆಚ್ಚಿಗೆ ಪ್ರಮಾಣದಲ್ಲಿ ನಿದ್ದೆ ಗುಳಿಗೆ ಸೇವಿಸಿರಬೇಕೆಂದು ಅಭಿಪ್ರಾಯಪಟ್ಟರು. ಅಷ್ಟರಲ್ಲಿ ಬಂದ ವೈದ್ಯಾಧಿಕಾರಿ ಶ್ರೀ ಬೇಗ್‌ರವರು ಸಹ ಕು. ಭಾಗೀರಥಿಯವರನ್ನು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬಸವಕಲ್ಯಾಣ, ನಂತರ ಗುಲ್ಬರ್ಗಾ ಆಸ್ಪತ್ರೆಗೂ, ಅಲ್ಲಿಂದ ಹೈದರಾಬಾದ್ ಉಸ್ಮಾನಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ದಿನಾಂಕ ೨೧–೧–೬೮ರಂದು ಸಾಯಂಕಾಲ ೪–೨೦ ಗಂಟೆಗೆ ಭಾಗೀರಥಿ ಮೃತರಾದರು.

ದಿನಾಂಕ ೧೭–೧–೬೮ರಂದು ಮಂಟಾಳ ಆಸ್ಪತ್ರೆಯ ನೌಕರ ಶ್ರೀ ಸುಭಾಷ್ ಎಂಬುವರ ಜೊತೆ ಮೃತಳು ಆತನ ಪೆಂಡತಿ ದೇವಕಿ ಎಂಬುವಳನ್ನು ನಿಂದಿಸಿ ಜಗಳವಾಡಿದಾಗ ಆತನು ತನ್ನ ಪತ್ನಿಯ ಮೇಲಿನ ಆರೋಪಗಳನ್ನು ಮೃತಳು ಸಾಬೀತು ಮಾಡಬೇಕಾಗುತ್ತದೆ ಎಂದು ಆಕೆಯನ್ನು ಹೆದರಿಸಿದರು. ಮೃತಳ ಜೊತೆಗಾರ್ತಿಯಾದ ಕು. ರಂಗಮ್ಮ ಮತ್ತು ಮೃತಳ ದೊಡ್ಡಮ್ಮನ ಮಗಳು ಕು.ಪಿ ಎ. ರಾಧಾರವರು ಮೃತಳಿಗೆ ಮಂಟಾಳ ಪೋಲೀಸ್ ಪೇದೆ ಅಶೋಕ ಎಂಬುವವನು ಕಿರುಕುಳ ಕೊಡುತ್ತಿದ್ದನೆಂದು ತಿಳಿಸಿದ್ದಾರೆ. ಆದುದರಿಂದ ಮೃತಳು ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಸಾಕ್ಷಿಗಳು ತಿಳಿಸಿದ್ದಾರೆ.

ದಿನಾಂಕ ೧೮–೧–೬೮ರಂದು ಬೆಳಿಗ್ಗೆ ೮–೩೦ ಸಮಯದಲ್ಲಿ ಮಂಟಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಬೇಗ್‌ರವರು ಮಂಟಾಳ ಪೋಲೀಸ್ ಠಾಣೆಗೆ ಕೊಟ್ಟ ವರದಿಯ ಮೇಲೆ ಸಬ್‌ಇನ್ಸ್‌ಪೆಕ್ಟರ್‌ರವರು ಗುಹ್ಯ ನಂ. ೩.೬೮ ಕಲಂ ೩೦೯ ಭಾ. ದಂ. ಸಂ. ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ. ಮೃತಳನ್ನು ಪರೀಕ್ಷಿಸಿದ ವೈದ್ಯಾಧಿಕಾರಿಗಳ ಅಭಿಪ್ರಾಯದಂತೆ ಮೃತಳ ಮೇಲೆ ದೈಹಿಕವಾಗಿ ನಡೆದ ಯಾವುದೇ ಬಲತ್ಕಾರದ ಚಿಹ್ನೆಗಳನ್ನು ಕಂಡಿರುವುದಿಲ್ಲ.

ಮೃತಳ ಅಸ್ವಾಭಾವಿಕ ಸಾವಿನ ಬಗ್ಗೆ ಹೈದರಾಬಾದ್ ಆಫಜಲ್‌ಗಂಜ್ ಪೋಲೀಸ್ ಠಾಣೆಯಲ್ಲಿ ಗುಪ್ತ ಸಂ. ೨೪:೬೮ ಕಲಂ ೧೭೪ ಕ್ರಿ. ಪೋ. ಕೋ. ಪ್ರಕಾರ ಪ್ರಕರಣವನ್ನು ದಾಖಲೆ ಮಾಡಿಕೊಳ್ಳಲಾಗಿದೆ. ಉಸ್ಮಾನಿಯ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ತತ್ಕಾಲಿಕ ಪ್ರಮಾಣ ಬಂದಿದ್ದು ಅವರಲ್ಲಿ ಮೃತಳು ಹೆಚ್ಚಿನ ಪ್ರಮಾಣದಲ್ಲಿ ನಿದ್ದೆಗುಳಿಗೆ ನುಂಗಿದ್ದರಿಂದ ಹೃದಯ ಕ್ರಿಯೆ ನಿಂತು ಸತ್ತಿದ್ದಾಳೆಂದು ಅಭಿಪ್ರಾಯ ಪಟ್ಟಿದ್ದಾರೆ. ಮೃತಳ ರಕ್ತ ಮತ್ತು ಮೂತ್ರವನ್ನು ವಿಧಿ ವಿಜ್ಞಾನಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಿರುತ್ತೆ.

ವಿಶೇಷ ತನಿಖೆಗಾಗಿ ಈ ಪ್ರಕರಣವನ್ನು ಸಿ.ಐ.ಡಿ. ವಿಭಾಗಕ್ಕೆ ಪಹಿಸಲಾಗಿದ್ದು, ತನಿಖೆ ಮುಂದುವರಿದಿದೆ,

(೨) ಶ್ರೀಮತಿ ಪದ್ಮಲತಾರವರ ಪ್ರಕರಣ :

ತುಮಕೂರು ಜಿಲ್ಲೆಯಲ್ಲಿ ಪದ್ಮಲತಾ ಎಂಬುವವರ ಪ್ರಕರಣ ಯಾವುದೂ ಇಲ್ಲ. ಆದರೆ ಪಾವಗಡ ತಾಲ್ಲೂಕಿನ ಪದ್ಮಾವತಮ್ಮ ಎಂಬು ಎ. ಎನ್. ಎಂ. ರವರ ಜೊತೆ ಅಲ್ಲಿನ ಪಂಚಾಯಿತ್ ಪ್ರಧಾನರ ಅಸಭ್ಯ ರೀತಿಯಿಂದ ವರ್ತಿಸಿದ್ದಾರೆಂದು ಪಂಂದೆ ಇವರ ಮೇಲೆ ಪೋಲೀಸರು ಹಲ್ಲೆ ನಡೆಸಿದ್ದಾರೆಂದು ವರದಿಯಾಗಿದ್ದು ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಯುತ್ತಿದೆ.

(೩) ಶ್ರೀಮತಿ ಭಾರತಿರವರ ಪ್ರಕರಣ :

ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕು ಕುಂಚಾವರಮ್‌ನಲ್ಲಿ ಕೆಲಸ ಮಾಡುತ್ತಿದ್ದ ಎ.ಎನ್.ಎಂ. ಭಾರತಿಯವರು ವಿಷ ಕುಡಿದು ಸತ್ತಿದ್ದಾರೆಂದು ವಿಧಿ ವಿಜ್ಞಾನ ಪ್ರಯೋಗಾಲಯದ ಸರ್ಟಿಫಿಕೇಟ್ ಆಧಾರದ ಮೇಲೆ ತಿಳಿದು ಬಂದಿದೆ. ಇವರು ತನ್ನ ಗಂಡನೊಂದಿಗೆ ಜಗಳವಾಡುತ್ತಿದ್ದರೆಂದೂ ಸಹ ತಿಳಿದುಬಂದಿದೆ.

(೪) ಶ್ರೀಮತಿ ಲಲಿತ ರವರ ಪ್ರಕರಣ ;

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಭೈನವಿಕಲ್ ನ ಶ್ರೀಮತಿ ಲಲಿತ ಸಿಂತ್ರಿ ಎಂಬ ಎ. ಎನ್ ಎಂ. ಜೀವನದಲ್ಲಿ ಜಿಗುಪ್ಸೆಗೊಂಡು ವಿಷ ಸೇವಿಸಿ ತೀರಿಹೋಗಿದ್ದಾರೆಂದು ಮಹಜರ್‌ನಿಂದ ತಿಳಿದ. ಬಂದಿದೆ. ಆದರೆ ಶವ ಪರೀಕ್ಷೆಯಲ್ಲಿ ಆಕೆ ನೇಣು ಹಾಕಿಕೊಂಡು ತೀರಿ ಹೋದರೆಂದು ತಿಳಿದು ಬಂದಿದೆ. ಇದರ ಬಗ್ಗೆ ಇನ್ನೂ ತಪಾಸಣೆ ನಡೆಯುತ್ತಿದೆ.

೧೨-೫೦ ಪಿ. ಎಂ.

ಸುಳ್ಯ ತಾಲ್ಲೂಕಿನಲ್ಲಿ ಜಾಲ್ಸೂರಿನಲ್ಲಿ ಸಾರಿಗೆ ಸಂಸ್ಥೆಗಳ ಬಸ್ಸುಗಳ ನಿಲುಗಡೆಗೆ ಒತ್ತಾಯ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ, ಜಾಲ್ಸೂರು ಎಂಬಲ್ಲಿ ಆರಣ ಇಲಾಖೆ ಮತ್ತು ಕಂದಾಯ ಇಲಾಖೆಯ ತಪಾಸಣಾ ಗೇಟು ಇರುವುದು. ಈ ಗೇಟು ಇಲ್ಲಿ ಮಂಗಳೂರು-ಮೈಸೂರು, ಬೆಂಗಳೂರು ಹೆದ್ದಾರಿಗೂ ಜಾಲ್ಸೂರು, ಕಾಸರಗೋಡು ರಸ್ತೆಗೂ ಅಡ್ಡಲಾಗಿ ಬರುವುದು. ಈ ಜಾಲ್ಸೂರು ಎಂಬ ಸ್ಥಳದ ಪರಿಸರದಲ್ಲಿ, ವಾಣಿಜ್ಯ ಕಟ್ಟಡಗಳು, ತಪಾಸಣಾ ಅಧಿಕಾರಿಗಳ ಕಛೇರಿ, ಹಾಗೂ ಇನ್ನಿತರ ಖಾಸಗಿ ಸಂಸ್ಥೆ, ಶಾಲೆಗಳೂ ಬರುವುದು. ಇಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ, ಎಕ್ಸ್‌ಪ್ರೆಸ್, ತಡೆರಹಿತ ಬಸ್ಸುಗಳಿಗೆ ನಿಲುಗಡೆ ಕೊಡಂತ್ತಿಲ್ಲ. ಪ್ರಕೃತ ಈ ಗೇಟು ಬಳಿ ಮಂಗಳೂರು-ತಿಪಟೂರು, ತಿಪಟೂರು-ಮಂಗಳೂರು ಒಂದು ತಡೆರಹಿತ ಬಸ್ಸಿಗೆ ಮಾತ್ರ ದಿನದಲ್ಲಿ ಎರಡು ಬಾರಿ ನಿಲುಗಡೆ ನೀಡಲಾಗುತ್ತಿದೆ, ಇತರ ರಾಜ್ಯ ಸಾರಿಗೆ ಬಸ್ಸುಗಳಿಗೆ (ತಡೆರಹಿತ. ಎಕ್ಸ್‌ಪ್ರೆಸ್) ಬಸ್ಸುಗಳಿಗೆ ನಿಲುಗಡೆ ಕೊಡದೆ ಇರುವುದರಿಂದ ಮಂಗಳೂರು ಕಡೆಯಿಂದ ಬರುವ ಪ್ರಯಾಣಿಕರು ಜಾಲ್ಸೂರಿನಲ್ಲಿ ಇಳಿಯುವ ಬದಲು ೨೦ ಕಿಲೋಮೀಟರ್ ದೂರದ ಸುಳ್ಯಕ್ಕೆ ಹೋಗಿ ಇಳಿಯಬೇಕಾಗುವುದು. ಸುಳ್ಯದ ಕಡೆಯಿಂದ ಬಂದ ಪ್ರಯಾಣಿಕರು ಜಾಲ್ಸೂರು ಎಂಬಲ್ಲಿ ಇಳಿಯುವ ಬದಲು ೨೭ ಕಿಲೋಮೀಟರ್ ದೂರದ ಪುತ್ತೂರಿನಲ್ಲಿ ಹೋಗಿ ಇಳಿಯಬೇಕಾಗುವುದು ಮಾತ್ರವಲ್ಲದೆ, ರಾತ್ರಿ ಹೊತ್ತಿನಲ್ಲಿ ಬಡ ನಿರ್ಗತಿಕ ಪ್ರಯಾಣಿಕನೂ ನೂರಾರು ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಿ ಖಾಸಗೀ ವಾಹನಗಳನ್ನು ಬಾಡಿಗೆ ಹಿಡಿದು ಜಾಲ್ಸೂರು ಎಂಬ ಸ್ಥಳವನ್ನು ಸೇರಬೇಕಾಗುವುದು. ಅದೇ ರೀತಿ ಜಾಲ್ಸೂರಿನಲ್ಲಿ ಇಳಿದು ಪಂಜಿಕಲ್ಲು-ಕಾಸರಗೋಡಿಗೆ ಹೋಗುವ ಮತ್ತು ಅಲ್ಲಿಂದ ಬರುವ ಪ್ರಯಾಣಿಕರೂ ಇದೇ ತೊಂದರೆಗಳನ್ನು ಅನುಭವಿಸುತ್ತಿರುವರು.

ಆದುದರಿಂದ ಜಾಲ್ಸೂರು ತಪಾಸಣಾ ಗೇಟು ಬಳಿ, ಹೇಗೆ ಆದರೂ ಯಾವುದೇ ವಾಹನಗಳು ನಿಂತು ಮುಂದೆ ಸಾಗಲೇ ಬೇಕಾಗುವುದು. ಆದುದರಿಂದ ಇಲ್ಲಿ ತಡೆರಹಿತ ಮತ್ತು ಎಕ್ಸ್‌ಪ್ರೆಸ್, ಕ.ರಾ.ರ.ಸಾ., ಸಂಸ್ಥೆ ಬಸ್ಸುಗಳನ್ನು ಒಂದೆರಡು ನಿಮಿಷದ ನಿಲುಗಡೆ ಕೊಟ್ಟು ಪ್ರಯಾಣಿಕರಿಗೆ ಉಪಕಾರವನ್ನು ಮಾಡಬೇಕಾಗಿ, ಇಲಾಖೆಯನ್ನು ಸರ್ಕಾರದ ಮೂಲಕ ಒತ್ತಾಯಿಸುತ್ತೇನೆ.